ಕೃಷಿ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳು.

2757: (3813)

ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. 1998-99ನೇ ಸಾಲಿನಲ್ಲಿ ಇದುವರೆಗೆ ಕೃಷಿ ಇಲಾಖಾವತಿಯಿಂದ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕೈಗೊಂಡಿರುವ ವಿವಿಧ ಯೋಜನೆಗಳು, ಹಾಗೂ ಕಾರ್ಯಕ್ರಮಗಳು ಯಾವುವು?

2. ಇವುಗಳಿಗೆ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

1. 1998-99ನೇ ಸಾಲಿನಲ್ಲಿ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಜಿಲ್ಲಾ ವಲಯದಡಿಯಲ್ಲಿ ಕೇಂದ್ರ ಪುರಸ್ಕೃತ ತೀವ್ರಹತ್ತಿ ಅಭಿವೃದ್ಧಿ ಯೋಜನೆ ಕೇಂದ್ರ ಪುರಸ್ಕೃತ ಎಣ್ಣೆಕಾಳು ಅಭಿವೃದ್ಧಿ ಯೋಜನೆ, ಸಸ್ಯಸಂರಕ್ಷಣಾ ಯೋಜನೆ, ಕೇಂದ್ರ ಪುರಸ್ಕೃತ ಬೇಳೆಕಾಳು ಅಭಿವೃದ್ಧಿ ಯೋಜನೆ, ಕೇಂದ್ರಪುರಸ್ಕೃತ ಸಮಗ್ರ ಏಕದಳ ಧಾನ್ಯ ಅಭಿವೃದ್ಧಿ, ಯೋಜನೆ (ಒರಟು ಧಾನ್ಯಗಳು) ವೇಗವರ್ಧಕ ಮುಸುಕಿನಜೊಳ ಅಭಿವೃದ್ಧಿ ಯೋಜನೆ. ರಾಜ್ಯವಲಯದಡಿಯಲ್ಲಿ (ಬೆಳೆ ಉತ್ಪಾದನೆ) ಸಸ್ಯಸಂರಕ್ಷಣಾ ಯೋಜನೆ, ಸಾವಯವ ಕೃಷಿ ಯೋಜನೆ, ಸುಧಾರಿತ ಕಾಂಪೊಸ್ಟ್ ತಯಾರಿಕಾ ಯೋಜನೆ, ಚುನಾಯಿತ ಪ್ರತಿನಿಧಿಗಳ ಸಂಪರ್ಕ ಯೋಜನೆ, ಜೈವಿಕ ಗೊಬ್ಬರದ ಜನಪ್ರಿಯಗೊಳಿಸುವ ಯೋಜನೆ ಕೃಷಿ ಯಾಂತ್ರಿಕರಣಕ್ಕೆ ಪವರ್ ಟಿಲ್ಲರ್, ಹಾಗೂ ಹೈಟೆಕ್ ಯಂತ್ರೋಪಕರಣಗಳ ವಿತರಣೆ ಯೋಜನೆ ವಿಶೇಷಘಟಕ ಯೋಜನೆ, ಗಿರಿಜನ ಉಪಯೋಜನೆ ಮತ್ತು ಭೂಸಾರ ಸಂರಕ್ಷಣೆಯಲ್ಲಿ ದಶಲಕ್ಷ ಬಾವಿ ಯೋಜನೆ, ಉದ್ಯೋಗ ಭರವಸೆ ಯೋಜನೆ, ಬರಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ ಬಯಲುಸೀಮೆ ಅಭಿವೃದ್ಧಿ ಯೋಜನೆ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ.

2. ಜಿಲ್ಲಾ ವಲಯದಡಿಯಲ್ಲಿ 11.61 ಲಕ್ಷರೂಗಳು ರಾಜ್ಯವಲಯದಡಿಯಲ್ಲಿ 1.643 ಲಕ್ಷರೂಗಳು ವಿಶೇಷ ಘಟಕ ಯೋಜನೆಯಡಿಯಲ್ಲಿ 2.70ಲಕ್ಷ ರೂ.ಗಳು ಗಿರಿಜನ ಉಪಯೋಜನೆಯಲ್ಲಿ 2.84 ಲಕ್ಷರೂಗಳನ್ನು ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳಲ್ಲಿ 90.93 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗುವುದು.